UNIVERSITY OF AGRICULTURAL SCIENCES, DHARWAD

# ICAR - KRISHI VIGYAN KENDRA

SAIDAPUR FARM, DHARWAD -580 005

Newsletter

**Volume : 16** **Issue : 4** **October - December, 2017**

## World Food Day - 2017

University of Agricultural Sciences, Dharwad, Karnataka Science & Technology Academy, Bengaluru, GoK & ICAR-Krishi Vigyan Kendra, Dharwad jointly organized World Food Day 2017. The programme was inaugurated by Dr. Mallanna Nagaral, Jagjivan Ram Abhinav Kisan Awardee Farmer addressed the farmers on various issues like soil and water conservation, rain water harvesting and conservation and propagation of traditional varieties and integrated farming system. Dr. D. P. Biradar, Hon'ble Vice Chancellor, UAS, Dharwad presided over the function. Shri. V. K. Shrinivas, Scientific Officer, KSTA, Bengaluru & Shri Ishwarchandra Hosamani, Member, Board of Management, UAS, Dharwad were the Chief Guests of the function. Dr. B. H. Nagur, Associate Professor (Economics), Karnataka University, Dharwad as a resource person delivered a lecture on Change the Future of Migration: Invest in Food Security & Rural Development. Dr. H. Basappa, Director of Extension, UAS, Dharwad, Dr. S. T. Naik, Dean(PGS), UAS, Dharwad, Dr. S. K. Gali, Dean (SW), UAS, Dharwad & Dr. Shubha S., Senior Scientist and Head, KVK, Dharwad were present on the occasion. The dignitaries distributed the prizes to the students who participated in the essay, quiz & poster making competition on the theme of agriculture and food security. A cooking competition on healthy and indegeous food was arranged on the occasion for farm women and certificates were distributed to the prize winning rural women.

## Training on "Integrated Farming System"

KVK, Dharwad in association with ATMA scheme of Department of Agriculture organized a training programme on Integrated Farming System on 03.11.2017 at KVK, Dharwad. Dr. L. Manjunath, Associate Director of Extension, UAS, Dharwad inauguarated by watering the plant. In his inaugural address he called farmers to focus on dairy farming, vegetable and fruit cultivation in integrated farming system. The programme was presided by Dr. Shubha S., Senior Scientist and Head, KVK, Dharwad. Shri Rajashekhar Bhat and Shri Manjunath Kusugal, Block Technical Officers were present in the function. Dr. Prasanna Kumar B. H., Scientist (Agronomy), KVK, Dharwad welcomed the farmers and guests and made an introductory speech about the training. Dr. Vinutha U. Muktamath, Scientist (Home Science) and Dr. Prasanna Kumar B. H., Scientist (Agronomy) gave the training on integrated farming system. 50 farmers from Belagavi and Khanapur taluka participated in training and visited the farm pond, vermicompost and goat rearing units of KVK, Dharwad and received detailed information about the same.







## Mahila Kisan Diwas celebrated at KVK, Dharwad on 15.10.2017

ICAR-Krishi Vigyan Kendra, Dharwad organized training on **"Nutrition and Enterprises"** on the eve of **"Mahila Kisan Divas"** celebration at KVK, Dharwad on 15.10.2017 under the theme nutrition and income generation. Dr. Shubha S. Senior Scientist and Head, KVK, Dharwad delivered an introductory speech on the importance of celebrating Mahila Kisan Diwas and called the women farmers to take up subsidiary occupations like dairy, small scale food enterprises, vegetable cultivation etc., to have a sustainable livelihood.

On the occasion Dr. Vinutha U. Muktamath, Scientist (Home Science), KVK, Dharwad trained the women SHG members of Guddada Hulikatti village of Kalghatagi taluka to prepare composite millet nutri mix, packaging, labeling and market linkage to start as a agricultural enterprise. A cooking competition for rural women on the theme low cost health and nutritious foods was organized and 18 farm women from different villages like Garag, Gamanagatti, Halligeri, Kotabagi, Amaragol, Yattinagudda and Dharwad participated in the competition. An exhibition cum sale of SHG products like millet based snacks, processed millets, nutri mix and bamboo products was arranged. More than 200 people from University and outside visited the exhibition and purchased the products.

Dr. D. P. Biradar, Hon'ble Vice Chancellor, UAS, Dharwad, Dr. H. Basappa, Director of Extension, UAS, Dharwad and Dr. L. Manjunath, Associate Director of Extension, UAS, Dharwad visited the exhibition cum sale and appreciated the women entrepreneurs.In the afternoon, a formal closing ceremony was organized in which certificates and prizes were distributed to the prize winners of cooking competition. Also the 3 women farmers were honoured for their excellent achievements in agriculture and subsidiary occupations like poultry, dairy, vegetable cultivation and marketing, millet processing and value addition namely Smt Sunita Vinod Mandekar, Devara Gudihal village, Hubballi Taluka, Smt. Gangavva Avaradi, Gamanagatti village, Hubballi Taluka and Smt. Manjula Prakash Sangolli, Garag village, Dharwad Taluka by Dr. Shubha S. Senior Scientist and Head and other Scientists of KVK. These women shared their experiences with farm women present on the occasion. About 53 farm women from different villages of the district participated in the event. Dr. Vinutha U. Muktamath, Scientist (Home Science), KVK, Dharwad compeered and provided training to the farm women. Dr. Jayashree Pattar, Scientist (Animal Science), KVK, Dharwad proposed vote of thanks and all Scientists and Staff of KVK participated in the programme.





## Training on "Saviruchi Sanchari Canteen"

Krishi Vigyan Kendra, Dharwad in association with Karnataka State Womens' Development Board, Bengaluru, Women and Child Welfare Development and AWAKE, Bengaluru organized a two days training on implementation of "Saviruchi Sanchari Canteen" from 17.11.2017 to 18.11.2017. The training was inaugurated by Smt. Bharati Shankar, President, Karnataka State Womens' Development Board by watering the plant. In her inaugural speech, she said that the scheme Saviruchi Sanchari Canteen is being implemented through Women SHGs with a moto to empower and the women SHG members participating in this training are the voice representing 15000 women SHG members. Smt. Devaki, Engineer and young women entrepreneur, Hubballi, Dr. Shubha S., Senior Scientist and Head, KVK, Dharwad and Dr. L. Manjunath, Associate Director of Extension, UAS, Dharwad were the chief guests of the programme. In this training, women SHG leaders of 40 Stree Shakti Unions of Dharwad, Belagavi, Haveri and Karwar district received training on capacity building of women entrepreneurs' registration of enterprise, hygiene and health safety, nutritional importance of millets and organic food products, accounting and marketing.







## "Transferring progressive farmers innovative technologies to other farmers through training"

KVK, Dharwad and Dept. of Agriculture jointly organized four trainings of three days duration on "Transferring progressive farmers innovative technologies to other farmers through training" from November to December 2017. Dr. H. Basappa, Director of Extension, UAS, Dharwad inaugurated the training programme and called the farmers to go for integrated farming system, vermicompost production, organic farming, seed production, millet production & value addition and dairy farming for sustainable farming. The special feature of this training programme was that progressive farmers themselves were the resource persons. There are many successful examples of such farmers who have developed innovative approaches by research and experience in their own fields on agriculture and allied areas which has increased their financial status today. So, Dr. H. Basappa, called the farmers' to adopt such successful technologies to take up agriculture as a successful enterprise. Dr. Shubha S., Senior Scientist and Head, explained the importance of organizing the programme. She said such training programmes are arranged to encourage other farmers successful achievement and experience through "learning by seeing and learning by practicing". The training programme was conducted in several progressive awardee farmers like Shri Malleshappa Bisirotti, Hiregunjal village of Kundagol taluka, Dr. Pandurang Gandamali, Gamanagatti village of Hubballi taluka, Shri S. S. Ronad, Navalur village, Shri Basavaraj Huchhayyanavar, Chikkamalligawad village and Shri Pakash Sangolli, Garag village Dharwad taluka, Smt. Girijavva Tadas and Shri Chandrashekhar Patil of Tabakada Honnihalli village, Shri M. V. Patil, Guddada Hulikatti village of Kalaghatagi taluka. About 120 farmers of the district were participated and benefitted by the training programme.






## "Farmers, Bank Officers and Development Department Officers interface meeting"

Krishi Vigyan Kendra, Dharwad organized Farmers, **Bank Officers and Development Department Officers interface meeting** on 18.07.2017. Shri S. L. Vijaya Kumar, Senior Manager, Vijaya Bank (District Lead Bank) explained and interacted with farmers' about crop loan and insurance. Shri U. V. Bani, Chief Manager, Senior Manager, Karnataka Vikas Grameena Bank, Dharwad explained that crop insurance registration can be done in various national banks, co-operative banks and general service centre. Mrs. Sheela Bhandarkar, DGM, NABARD gave information about various loan and subsidy facilities related to dairy, vermicompost, milking machine, milk cooling unit, soil testing centre and also to setup the agro business by Agriculture graduates. Shri. S. K. Kannure, Agriculture Officer, Agriculture Department explained about Pradhan Mantri Fasal Bima Yojana in detail pertaining to list of crops covered under Hobli and Gram Panchayat level and fixed depreciation level for different crops, insurance amount and insurance premium to be paid by different class of farmers during kharif season. Dr. S. B. Diddimani, Deputy Director of Horticulture explained about the facilities available in Horticulture Department such as drip irrigation, farm pond, free coconut plants and providing global certification to 150 mango growers for export. Dr. Rakesh, Deputy Director, Department of Animal Husbandry explained about Pashu Bhagya Yojane, Amruta Yojane and providing fodder mini kit and other machineries like fodder chaff cutter, milking machine by the Animal Husbandry Department.

During the meeting, Officers of Agriculture and Horticulture department were explained in detail about the Pradhan Mantri Fasal Bima Yojana, guidelines about crops covered under the yojana to the farmers. The farmers discussed about their crop insurance problems with the department and bank officials. Dr. S. M. Mantur, Senior Scientist & Head and President of the function requested the farmers to avail the crop loan facilities and benefits of Pradhan Mantri Fasal Bima Yojana. More than 90 farmers and farm women of the district participated in the programme.






## "ಶ್ರೀಗಂಧದ ಬೇಸಾಯ ಮತ್ತು ಅರಣ್ಯ ಕೃಷಿ ಸಂಬಂಧಿತ ವಿಷಯಗಳ ಕುರಿತು ತರಬೇತಿ"

Krishi Vigyan Kendra, Dharwad and Institute of wood Science and Technology, Bengaluru has jointly organized one day training programme on 08.12.2018 at Krishi Vigyan Kendra, Dharwad. Dr. Shubha S., Senior Scientist and Head, explained the importance of organizing the programme. She said such training programmes are arranged to encourage other farmers to practice sandalwood cultivation. Dr. P.V. Somashekar Scientists (Biotechnology), Institute of wood Science and Technology, Bengaluru address the farmers about nursery management, Host plants of sandalwood and agro-forestry system. and Dr. K.T. Chandrashekar, Scientist (Forest Botony), Institute of wood Science and Technology, Bengaluru, He gave lectures on disruption of the barriers, the liberation of the laws, the methods of protecting sandalwood from the robbers and the management of the pests. Handwritten manual copies Sandalwood cultivation practices were distributed to the trainees and the exhibition was also organized. Dr. Akkammahadevi D. Agasimani, Scientist (Horticulture), KVK, Dharwad compeered and welcomed all the digniteries and participants and provided training to the farmers More than 60 farmers, Enterpreuners and youths from different districts of the state were participated in the programme.







## Digniteries visit to Krishi Vigyan Kendra



Dr. H.Basappa, Director of Extension, UAS, Dharwad, he visited KVK, Dharwad after taking over as Director of Extension and examined the progress of scientists' activities at the Center's demonstration units on 13.10.2017.


**Editor & Publisher** : **Dr. S. Shubha**
Senior Scientist and Head
ICAR-Krishi Vigyan Kendra Dharwad

**Type Setting and Design** : **DTP Unit**
Publication Centre, UAS, Dharwad

**Associate Editors :**
**Mrs. Vinutha U. Muktamth**
**Dr. Prasanna Kumar B. H.**
**Dr. Vijay Kumar C.**
**Dr. Akkamahadevi D. Agasimani**
**Kum.Kalavathi K.Kambali**
**Smt. Shailaja N Galagali**
**Dr. Jayashree Pattar**
**Dr. Praveen Goroji**



From,
**Senior Scientist and Head**
ICAR-Krishi Vigyan Kendra
Saidapur Farm, Dharwad 580 005
Karnataka, Telephone : 0836-2444272
E-mail : kvkdwd@uasd.in
Website : www.kvkdharwad.org
Facebook : Krishi Vigyan Kendra Dharwad


To,

________________________

**Book Post**

For free Kisan mobile advisory services, please call 0836-2444272 / visit www.kvkdharwad.org for registration



ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಭಾ.ಕೃ.ಸಂ.ಮಂ.- ಕೃಷಿ ವಿಜ್ಞಾನ ಕೇಂದ್ರ

ಸೈದಾಪುರ ಫಾರ್ಮ, ಧಾರವಾಡ -580 005

ವಾರ್ತಾ ಪತ್ರ

ಸಂಪುಟ: 16 ಸಂಚಿಕೆ: 4 ಅಕ್ಟೋಬರ್-ಡಿಸೆಂಬರ್, 2017

## ವಿಶ್ವ ಆಹಾರ ದಿನಾಚರಣೆ

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರ ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಆಕಾಡೆಮಿ, ಬೆಂಗಳೂರು, ಕರ್ನಾಟಕ ಸರ್ಕಾರ ಇವರ ಸಂಯುಕ್ತಾಶ್ರಯದಲ್ಲಿ **"ವಿಶ್ವ ಆಹಾರ ದಿನಾಚರಣೆ"** ಯನ್ನು ದಿ.16.10.2017 ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ **ಪ್ರೇಕ್ಷಾಗೃಹದಲ್ಲಿ** ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ಮತ್ತು ಉದ್ಘಾಟಕರಾಗಿ ಆಗಮಿಸಿದ ಜಗಜೀವನರಾಮ್ ಅಭಿನವ ಕಿಸಾನ್ ಪ್ರಶಸ್ತಿ ಪುರಸ್ಕೃತರು ಹಾಗೂ ಪ್ರಗತಿಪರ ರೈತರಾದ ಡಾ. ಮಲ್ಲಣ್ಣ ನಾಗರಾಳ ಇವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಣ್ಣಿನ ಮತ್ತು ನೀರಿನ ಸಂರಕ್ಷಣೆ, ಮಳೆ ನೀರು ಕೊಯ್ಲು, ಸಾಂಪ್ರದಾಯಿಕ ತಳಿಗಳ ಸಂರಕ್ಷಣೆ ಹಾಗೂ ಪ್ರಸಾರ, ಸಮಗ್ರ ಕೃಷಿ ಪದ್ಧತಿ ಕುರಿತು ರೈತರನ್ನು ಉದ್ದೇಶಿಸಿ ಮಾತನಾಡಿದರು. ಡಾ. ಡಿ. ಪಿ. ಬಿರಾದಾರ, ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪೌಷ್ಟಿಕ ಭದ್ರತೆಗಾಗಿ ಆಹಾರ ಧಾನ್ಯಗಳ ಉತ್ಪಾದನೆ ಕುರಿತು ಮಾತನಾಡಿದರು. ಶ್ರೀ ಈಶ್ವರ ಚಂದ್ರ ಹೊಸಮನಿ, ಸದಸ್ಯರು, ವ್ಯವಸ್ಥಾಪಕ ಮಂಡಳಿ, ಕೃ.ವಿ.ವಿ, ಡಾ.ಹೆಚ್.ಬಸಪ್ಪಾ, ವಿಸ್ತರಣಾ ನಿರ್ದೇಶಕರು, ಡಾ.ಎಸ್.ಟಿ.ನಾಯ್ಕ, ಡೀನ್(ಸ್ನಾತಕೋತ್ತರ), ಡಾ. ಎಸ್.ಕೆ.ಗಾಳಿ, ಡೀನ್(ವಿದ್ಯಾರ್ಥಿ ಕಲ್ಯಾಣ), ಡಾ. ಶುಭಾ ಎಸ್, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಕೆ.ವಿ.ಕೆ,ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಹಾಗೂ ಶ್ರೀ ವಿ.ಕೆ ಶ್ರೀನಿವಾಸ್, ವಿಜ್ಞಾನಿಗಳು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಆಕಾಡೆಮಿ ಇವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.ಡಾ. ಬಿ.ಎಚ್. ನಾಗೂರ್, ಸಹಾಯಕ ಪ್ರಾಧ್ಯಾಪಕರು(ಅರ್ಥಶಾಸ್ತ್ರ) ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ "ವಲಸೆಯ ಭವಿಷ್ಯದ ಬದಲಾವಣೆ: ಆಹಾರ ಭದ್ರತೆ ಹಾಗೂ ಗ್ರಾಮೀಣ ಅಭಿವೃದ್ಧಿಯಲ್ಲಿ ಹೂಡಿಕೆ" ಕುರಿತು ಉಪನ್ಯಾಸ ನೀಡಿದರು. ಈ ಸಂಧರ್ಭದಲ್ಲಿ ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಪ್ರಬಂಧ ಮತ್ತು ಪೋಸ್ಟರ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.ಸುಮಾರು 300 ಕ್ಕೂ ಹೆಚ್ಚು ಜನ ರೈತ ಹಾಗೂ ರೈತ ಮಹಿಳೆಯರು, ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಈ ಕಾರ್ಯಕ್ರಮವನ್ನು ಡಾ.ವಿನುತಾ ಯು.ಮುಕ್ತಾಮಠ, ವಿಜ್ಞಾನಿಗಳು(ಕೃಷಿ ವಿಜ್ಞಾನಿ) ಇವರು ಆಯೋಜಿಸಿದ್ದರು.

## ವಿಶ್ವ ಮಣ್ಣು ಆರೋಗ್ಯ ದಿನಾಚರಣೆ

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆ, ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ "ವಿಶ್ವ ಮಣ್ಣು ಆರೋಗ್ಯ ದಿನಾಚರಣೆ" ಕಾರ್ಯಕ್ರಮವನ್ನು ದಿ.05.12.2017 ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ಮತ್ತು ಉದ್ಘಾಟಕರಾಗಿ ಆಗಮಿಸಿದ ಡಾ. ಡಿ. ಪಿ. ಬಿರಾದಾರ, ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಣ್ಣಿನ ಮಹತ್ವ ಮತ್ತು ಸಂರಕ್ಷಣೆ ಕುರಿತು ರೈತರನ್ನು ಉದ್ದೇಶಿಸಿ ಮಾತನಾಡಿದರು. ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಡಾ ಪ್ರಕಾಶ ಭಟ್, ಪರಿಸರ ತಜ್ಞರು, ಧಾರವಾಡ ಇವರು ಮಾತನಾಡುತ್ತ, ಕಂಪ್ಲಿಕೊಪ್ಪ ಗ್ರಾಮದ ಶ್ರೀ ಮಲ್ಲಪ್ಪ ಹಕ್ಕದ ಇವರು ತಮ್ಮ 3 ಎಕರೆ ಜಮೀನಿನಲ್ಲಿ ಸುಮಾರು 12,000 ಮರಗಳನ್ನು ನೆಟ್ಟಿದ್ದಾರೆ. ಕಾರಣ ಹೊಲದಿಂದ ಒಂದು ಹನಿ ನೀರು ಕೂಡ ಹೊರಗೆ ಹೋಗದಂತೆ ನೋಡಿಕೊಳ್ಳುತ್ತಾರೆ. ಹೊಲದಲ್ಲಿ ಬದುಗಳನ್ನು ಹಾಕುವುದರಿಂದ ಮಣ್ಣಲ್ಲಿ ನೀರು ಇಂಗಿಸಬಹುದು. ಮಣ್ಣನ್ನು ರಕ್ಷಿಸಿ, ಬಿದ್ದ ಮಳೆ ನೀರನ್ನು ಹಿಡಿಯುವುದು ನಮ್ಮ ಮೊದಲ ಕರ್ತವ್ಯವಾಗಿದೆ ಎಂದು ನುಡಿದರು. ದನ-ಕರುಗಳು, ಮಣ್ಣು, ನೀರು, ಗಿಡ ಮರಗಳು ಮತ್ತು ಮನುಷ್ಯ ಈ ಐದು ಸಂಪತ್ತುಗಳು ಉತ್ತಮವಾಗಿದ್ದರೆ ಕೃಷಿ ಮಾಡಲು ಸೂಕ್ತವಾಗುತ್ತದೆ. ಇದೇ ಸಂದರ್ಭದಲ್ಲಿ ರೈತರಿಗೆ ಮಣ್ಣು ಪರೀಕ್ಷಾ ಕಾರ್ಡಗಳನ್ನು ವಿತರಿಸಲಾಯಿತು, ಮಣ್ಣು ಸಂರಕ್ಷಣೆ ಕುರಿತು ಪ್ರಧಾನ ಮಂತ್ರಿಗಳ ಮನ್ ಕಿ ಬಾತ್ ಕಾರ್ಯಕ್ರಮದ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯಿತು ಹಾಗೂ ಮಣ್ಣು ಮತ್ತು ನೀರು ಸಂರಕ್ಷಣೆ ಕುರಿತು ಹಸ್ತ ಪ್ರತಿಗಳನ್ನು ಬಿಡುಗಡೆ ಮಾಡಲಾಯಿತು. ಕೃಷಿ ವಿಶ್ವವಿದ್ಯಾಲಯದ ಸಹ ವಿಸ್ತರಣಾ ನಿರ್ದೇಶಕರಾದ ಡಾ.ಎಲ್ ಮಂಜುನಾಥ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಶ್ರೀ ಟಿ. ರುದ್ರೇಶಪ್ಪ , ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀ ಬಸವರಾಜ ಕುಂದರಗೋಳ, ಡಾ. ಶುಭಾ ಎಸ್. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸುಮಾರು 600ಕ್ಕೂ ಹೆಚ್ಚು ಜನ ರೈತ ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು









## ಮಹಿಳಾ ಕಿಸಾನ್ ದಿವಸ

ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ ಧಾರವಾಡ "ಮಹಿಳಾ ಕಿಸಾನ್ ದಿವಸ" ವನ್ನು ದಿ: 15.10.17 ರಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹಿಳೆಯರಿಗೆ " ಪೋಷಕಾಂಶ ಮತ್ತು ಉದ್ಯಮಶೀಲತೆ" ಕುರಿತು ತರಬೇತಿಯನ್ನು ಪೋಷಕಾಂಶ ಹಾಗೂ ಆದಾಯ ಉತ್ಪಾದನೆ ಎಂಬ ಶೀರ್ಷಿಕೆಯಡಿ ಹಮ್ಮಿಕೊಳ್ಳಲಾಗಿತ್ತು. ಡಾ. ಶುಭಾ ಎಸ್ , ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ತಮ್ಮ ಪರಿಚಯ ಭಾಷಣದಲ್ಲಿ ಮಹಿಳಾ ಕಿಸಾನ್ ದಿವಸ ಆಚರಣೆಯ ಮಹತ್ವವನ್ನು ಕುರಿತು ಭಾಗವಹಿಸಿದ ಮಹಿಳೆಯರಿಗೆ ತಿಳಿಸುತ್ತಾ ಕೃಷಿ ಪೂರಕ ಉದ್ದಿಮೆಗಳಾದ ಹೈನುಗಾರಿಕೆ, ಸಣ್ಣ ಆಹಾರ ಸಂಸ್ಕರಣಾ ಉದ್ಯಮಗಳು, ತರಕಾರಿ ಬೆಳೆ ಉತ್ಪಾದನೆಯನ್ನು ಸುಸ್ಥಿರ ಜೀವನಕ್ಕಾಗಿ ಕೈಗೊಳ್ಳುವ ಕುರಿತು ತಿಳಿಸಿದರು. ಇದೇ ಸಂದರ್ಭದಲ್ಲಿ ಡಾ. ವಿನುತಾ ಮುಕ್ತಾಮಠ, ವಿಜ್ಞಾನಿಗಳು (ಗೃಹ ವಿಜ್ಞಾನ) ಇವರು ಗುಡ್ಡದ ಹುಲಿಕಟ್ಟಿ ಗ್ರಾಮದ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಸಿರಿಧಾನ್ಯಗಳ ಡಾಯಾಬಿಟಿಕ್ ಮಿಕ್ಸ್, ಪ್ಯಾಕಿಂಗ್, ಲೇಬಲಿಂಗ್ ಮತ್ತು ಮಾರುಕಟ್ಟೆ ಸಂಪರ್ಕ ಹಾಗೂ ಉದ್ಯಮಶೀಲತೆ ಕುರಿತು ತರಬೇತಿ ಹಾಗೂ ಪ್ರಾತ್ಯಕ್ಷಿಕೆ ನೀಡಿದರು. ಇದರ ಅಂಗವಾಗಿ ಗ್ರಾಮೀಣ ಮಹಿಳೆಯರಿಗೆ ಕಡಿಮೆ ಖರ್ಚಿನ ಆರೋಗ್ಯಕರ ಮತ್ತು ಪೌಷ್ಠಿಕ ಅಡುಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಧಾರವಾಡ ಜಿಲ್ಲೆಯ ಗರಗ, ಗಾಮನಗಟ್ಟಿ, ಹಳ್ಳಿಗೇರಿ, ಗುಡ್ಡದಹುಲಿಕಟ್ಟಿ, ಕೊಟಬಾಗಿ,ಅಮರಗೋಳ,ಎತ್ತಿನಗುಡ್ಡ ಗ್ರಾಮಗಳ 18 ಮಹಿಳೆಯರು ಭಾಗವಹಿಸಿದ್ದರು. ಇದರೊಂದಿಗೆ ಸ್ವಸಹಾಯ ಸಂಘಗಳ ಸದಸ್ಯರು ತಯಾರಿಸಿದ ವಸ್ತುಗಳ (ಸಿರಿಧಾನ್ಯ ಪದಾರ್ಥಗಳು, ಸಂಸ್ಕರಿತ ಸಿರಿಧಾನ್ಯಗಳು, ಡಯಾಬಿಟಿಕ್ ಮಿಕ್ಸ್ ಮತ್ತು ಬಿದಿರಿನ ಕರಕುಶಲ ವಸ್ತುಗಳು) ಪ್ರದರ್ಶನ ಮತ್ತು ಮಾರಾಟವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 200 ಕ್ಕಿಂತ ಹೆಚ್ಚು ಜನರು ಭಾಗವಹಿಸಿ ಸ್ವಸಹಾಯ ಸಂಘದಿಂದ ತಯಾರಿಸಿದ ವಸ್ತುಗಳನ್ನು ಖರೀದಿಸಿದರು.





## "ಸವಿರುಚಿ ಸಂಚಾರಿ ಕ್ಯಾಂಟೀನ್ ಅನುಷ್ಠಾನ ಕುರಿತು ತರಬೇತಿ"

ಕೃಷಿ ವಿಜ್ಞಾನ ಕೇಂದ್ರ, ಧಾರವಾಡ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಅವೇಕ್ (ಕರ್ನಾಟಕ ರಾಜ್ಯ ಮಹಿಳಾ ಉದ್ದಿಮೆದಾರರ ಸಂಸ್ಥೆ), ಬೆಂಗಳೂರು ಇವರ ಸಹಯೋಗದಲ್ಲಿ ಸವಿರುಚಿ ಸಂಚಾರಿ ಕ್ಯಾಂಟೀನ್ ಅನುಷ್ಠಾನ ಕುರಿತು ಎರಡು ದಿನಗಳ ತರಬೇತಿಯನ್ನು ದಿನಾಂಕ: 17.11.2017 ಮತ್ತು 18.11.2017 ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಭಾರತಿ ಶಂಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಸಸಿಗೆ ನೀರುಣಿಸುವ ಮೂಲಕ ನೆರವೇರಿಸಿದರು. ಇವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸ್ವಸಹಾಯ ಸಂಘಗಳಿಗೆ ಸವಿರುಚಿ ಸಂಚಾರಿ ಕ್ಯಾಂಟೀನ್ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದು, ಇಲ್ಲಿ ಬಂದಿರುವ ಪ್ರತಿ ಮಹಿಳಾ ಒಕ್ಕೂಟದ ಸದಸ್ಯರು ಸುಮಾರು 15000 ಮಹಿಳೆಯರ ಧ್ವನಿಯಾಗಿರುತ್ತಾರೆ ಎಂದು ತಿಳಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀಮತಿ ದೇವಕಿ, ಇಂಜಿನೀಯರ್ ಹಾಗೂ ಯುವ ಮಹಿಳಾ ಉದ್ಯಮಿ, ಹುಬ್ಬಳ್ಳಿ ಮತ್ತು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಶುಭಾ ಎಸ್. ಮತ್ತು ಕೃಷಿ ವಿಶ್ವವಿದ್ಯಾಲಯದ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಎಲ್. ಮಂಜುನಾಥ ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ ಮಹಿಳಾ ಉದ್ಯಮಿಗಳ ಸಾಮರ್ಥ್ಯವರ್ಧನೆ, ಉದ್ಯಮದ ನೋಂದಣಿ, ನೈರ್ಮಲ್ಯ ಹಾಗೂ ಆರೋಗ್ಯ ಸುರಕ್ಷತೆ, ಸಿರಿಧಾನ್ಯಗಳ ಮಹತ್ವ, ಸಾವಯವ ಆಹಾರ ಪದಾರ್ಥಗಳ ಮಹತ್ವ, ಲೆಕ್ಕ ಪತ್ರಗಳ ನಿರ್ವಹಣೆ, ಮಾರುಕಟ್ಟೆ ಸೌಲಭ್ಯ ಇತ್ಯಾದಿ ಕುರಿತು ತರಬೇತಿಯನ್ನು ಧಾರವಾಡ, ಬೆಳಗಾವಿ, ಹಾವೇರಿ ಹಾಗೂ ಕಾರವಾರ ಜಿಲ್ಲೆಗಳ 40 ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಒಕ್ಕೂಟದ ಮುಖ್ಯಸ್ಥರು ಈ ತರಬೇತಿಯಲ್ಲಿ ಭಾಗವಹಿಸಿದ್ದಾರೆ. ಈ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದ ಗೃಹ ವಿಜ್ಞಾನಿಯಾದ ಡಾ. ವಿನುತಾ ಮುಕ್ತಾಮಠ ಇವರು ಸಮಯೋಜಿಸಿದ್ದರು.









## "ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ತರಬೇತಿಗಳ ಮೂಲಕ ಇತರೆ ರೈತರಿಗೆ ತಲುಪಿಸುವ" ತರಬೇತಿ

ಕೃಷಿ ವಿಜ್ಞಾನ ಕೇಂದ್ರ ಧಾರವಾಡ ಹಾಗು ಕೃಷಿ ಇಲಾಖೆ, ಧಾರವಾಡ ಇವರುಗಳ ಸಂಯುಕ್ತ ಆಶ್ರಯದಲ್ಲಿ "ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ತರಬೇತಿಗಳ ಮೂಲಕ ಇತರೆ ರೈತರಿಗೆ ತಲುಪಿಸುವ ನಾಲ್ಕು ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ನವೆಂಬರ್ ಹಾಗೂ ಡಿಸೆಂಬರ್ 2017 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೈಗೊಳ್ಳಲಾಗಿತ್ತು. ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿಸ್ತರಣಾ ನಿರ್ದೇಶಕರಾದ ಡಾ. ಎಚ್. ಬಸಪ್ಪ ಇವರು ತರಬೇತಿ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ರೈತರು ಸಮಗ್ರ ಕೃಷಿ ಪದ್ಧತಿ, ಎರೆಹುಳು ಉತ್ಪಾದನೆ, ಸಾವಯವ ಕೃಷಿ, ಬೀಜೋತ್ಪಾದನೆ, ಸಿರಿ ಧಾನ್ಯಗಳ ಉತ್ಪಾದನೆ ಮತ್ತು ಮೌಲ್ಯವರ್ಧನೆ ಹಾಗೂ ಪಶು ಸಂಗೋಪನೆ ಇತ್ಯಾದಿ ಅಳವಡಿಸಿಕೊಳ್ಳಲು ತಿಳಿಸಿದರು. ಈ ವಿಶೇಷ ತರಬೇತಿಗೆ ರೈತರೇ ಸಂಪನ್ಮೂಲ ವ್ಯಕ್ತಿಗಳಾಗಿದ್ದು ಹಾಗೂ ಸ್ವತಃ ಅನ್ವೇಷಣೆ ಕೈಗೊಂಡು ಆಧುನಿಕ ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಂಡು ಉತ್ಪಾದನೆ, ಉತ್ಪಾದಕತೆ ಹೆಚ್ಚಿಸಿ, ಆರ್ಥಿಕಮಟ್ಟ ಸುಧಾರಿಸಿಕೊಂಡ ಉದಾಹರಣೆಗಳು ಇದ್ದು ಅವರುಗಳ ಸಾಧನೆಗಳನ್ನು ಗಮನಿಸಿ ಅವರಂತೆಯೇ ತಾವುಗಳು ಸಹಾ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ಕೇಂದ್ರದ ಮುಖ್ಯಸ್ಥರಾದ ಡಾ. ಶುಭಾ ಎಸ್ ಇವರು ಕಾರ್ಯಕ್ರಮದ ಪ್ರಾಮುಖ್ಯತೆ ಕುರಿತು ವಿವರಿಸುತ್ತಾ ಇಂಥಹ ಪ್ರಗತಿಪರ ರೈತರ ಸಾಧನೆಗಳನ್ನು ಹಾಗೂ ಅನುಭವಗಳನ್ನು "ನೋಡಿ ಕಲಿ–ಮಾಡಿ ಕಲಿ" ಎಂಬ ನಿಟ್ಟಿನಲ್ಲಿ ರೈತರಿಂದ ರೈತರಿಗೆ ಪ್ರಸಾರಿಸಲು ಈ ವಿಶೇಷ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಸದರಿ ತರಬೇತಿಯಲ್ಲಿ ಕುಂದಗೋಳ ತಾಲೂಕಿನ ಹಿರೇಗುಂಜಾಳ ಗ್ರಾಮದ ರೈತ ಶ್ರೀ ಮಲ್ಲೇಶಪ್ಪ ಬಿಸಿರೊಟ್ಟಿ, ಜಿಲ್ಲೆಯ ಶ್ರೇಷ್ಟ ಕೃಷಿಕರಾದ ಹುಬ್ಬಳ್ಳಿ ತಾಲೂಕಿನ ಗಾಮನಗಟ್ಟಿ ಗ್ರಾಮದ ಡಾ. ಪಾಂಡುರಂಗ ಗಂಡಮಾಲಿ, ಧಾರವಾಡ ತಾಲೂಕಿನ ನವಲೂರ ಗ್ರಾಮದ ಜಿಲ್ಲಾ ಶ್ರೇಷ್ಠ ಕೃಷಿಕ ಪ್ರಶಸ್ತಿ ಪುರಸ್ಕೃತ ಶ್ರೀ ಎಸ್. ಎಸ್. ರೋಣದ, ಧಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ ಗ್ರಾಮದ ಜಿಲ್ಲಾ ಶ್ರೇಷ್ಟ ಕೃಷಿಕರಾದ ಬಸವರಾಜ ಹುಚ್ಚಯ್ಯನವರ, ಧಾರವಾಡ ತಾಲೂಕಿನ ಗರಗ ಗ್ರಾಮದ ಕೃಷಿ ಅನ್ವೇಷಕ ಶ್ರೀ ಪ್ರಕಾಶ ಸಂಗೊಳ್ಳಿ, ಜಿಲ್ಲಾ ಶ್ರೇಷ್ಟ ಕೃಷಿ ಮಹಿಳೆ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಗಿರಿಜವ್ವಾ ತಡಸ, ರಾಜ್ಯಮಟ್ಟದ ಡಾ. ಎಮ್. ಎಚ್. ಮರಿಗೌಡ್ ತೋಟಗಾರಿಕೆ ಪ್ರಶಸ್ತಿ ಪುರಸ್ಕೃತರಾದ ಕಲಘಟಗಿ ತಾಲೂಕಿನ ತಬಕದಹೊನ್ನಿಹಳ್ಳಿ ಗ್ರಾಮದ ಶ್ರೀ ಚಂದ್ರಶೇಖರ ಪಾಟೀಲ ಹಾಗೂ ಗುಡ್ಡದಹುಲಿಕಟ್ಟಿ ಗ್ರಾಮದ ಕೃಷಿ ಅನ್ವೇಷಕ ಶ್ರೀ ಎಮ್. ವಿ. ಪಾಟೀಲ, ಇವರುಗಳ ಕ್ಷೇತ್ರಗಳಿಗೆ ಭೇಟಿ ನೀಡಲಾಯಿತು. ಧಾರವಾಡ ಜಿಲ್ಲೆಯ ವಿವಿಧ ತಾಲೂಕಿನಿಂದ ಒಟ್ಟು 31 ರೈತ ಮತ್ತು ರೈತ ಮಹಿಳೆಯರು ಸದರಿ ತರಬೇತಿಯಲ್ಲಿ ಭಾಗವಹಿಸಿದ್ದರು






## ಸಮಗ್ರ ಕೃಷಿ ಪದ್ಧತಿ ಕುರಿತು ತರಬೇತಿ

ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ ಧಾರವಾಡ ಹಾಗೂ ಆತ್ಮ ಯೋಜನೆ ಇವರ ಸಂಯುಕ್ತಾಶ್ರಯದಲ್ಲಿ "ಸಮಗ್ರ ಕೃಷಿ ಪದ್ಧತಿ" ಕುರಿತು ತರಬೇತಿಯನ್ನು ದಿನಾಂಕ: 03.11.2017 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯ ಸಹ ವಿಸ್ತರಣಾ ನಿರ್ದೇಶಕರಾದ ಡಾ. ಮಂಜುನಾಥ ಎಲ್ ಇವರು ಗಿಡಕ್ಕೆ ನಿರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಮಗ್ರ ಕೃಷಿ ಪದ್ಧತಿಯಲ್ಲಿ ಹೈನುಗಾರಿಕೆ, ತರಕಾರಿ ಬೆಳೆ, ಹಣ್ಣಿನ ಬೆಳೆಗಳಿಗೆ ಹೆಚ್ಚು ಒತ್ತು ಕೊಡಬೇಕೆಂದರು. ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಶುಭಾ ಎಸ್. ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ರಾಜಶೇಖರ ಭಟ್, ಹಾಗೂ ಶ್ರೀ. ಮಂಜುನಾಥ ಕುಸಗಲ, ಬ್ಲಾಕ್ ಟೆಕ್ನಾಲಜಿ ಅಧಿಕಾರಿಗಳು, ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಡಾ. ಪ್ರಸನ್ನ ಕುಮಾರ ಬಿ.ಹೆಚ್, ವಿಜ್ಞಾನಿಗಳು (ಬೇಸಾಯಶಾಸ್ತ್ರ), ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರು ಆಗಮಿಸಿದ ಗಣ್ಯರು ಹಾಗೂ ರೈತರನ್ನು ಸ್ವಾಗತಿಸಿ, ಸಮಗ್ರ ಕೃಷಿಯ ಕುರಿತು ಪ್ರಾಸ್ತಾವಿಕವಾಗಿ ನುಡಿದರು. ಡಾ.ವಿನುತಾ ಯು.ಮುಕ್ತಾಮಠ, ವಿಜ್ಞಾನಿಗಳು(ಗೃಹ ವಿಜ್ಞಾನ) ಹಾಗೂ ಡಾ.ಪ್ರಸನ್ನ ಕುಮಾರ್, ವಿಜ್ಞಾನಿಗಳು (ಬೇಸಾಯಶಾಸ್ತ್ರ) ಇವರು ರೈತರಿಗೆ ಸಮಗ್ರ ಕೃಷಿ ಪದ್ಧತಿ ಕುರಿತು ಉಪನ್ಯಾಸ ನೀಡಿದರು.ಬೆಳಗಾವಿ ಮತ್ತು ಖಾನಾಪುರ ತಾಲೂಕಿನ ರೈತರು ಕೃಷಿ ವಿಜ್ಞಾನ ಕೇಂದ್ರದ ಪ್ರಾತ್ಯಕ್ಷಿಕೆ ತಾಕುಗಳಾದ ಎರೆಹುಳು ಉತ್ಪಾದನಾ ಘಟಕ, ಜಲ ಕೃಷಿ, ಆಡು ಸಾಕಾಣಿಕೆ ಕೃಷಿ ಹೊಂಡಕ್ಕೆ ಭೇಟಿ ನೀಡಿ ಸವಿಸ್ತಾರವಾದ ಮಾಹಿತಿಯನ್ನು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲೆಯ ವಿವಿಧ ಗ್ರಾಮದ 50 ಕ್ಕೂ ಹೆಚ್ಚು ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಭೆಯಲ್ಲಿ ಪ್ರಧಾನ ಮಂತ್ರಿ ಬೆಳೆ ವಿಮೆ ಯೋಜನೆ ಕುರಿತು ಕೃಷಿ ಹಾಗೂ ತೋಟಗಾರಿಕಾ ಇಲಾಖಾ ಅಧಿಕಾರಿಗಳು, ವಿಮೆಗೆ ಒಳಪಡುವ ಬೆಳೆಗಳು ಹಾಗೂ ಮಾರ್ಗಸೂಚಿ ಕುರಿತು ವಿಸ್ತಾರವಾಗಿ ರೈತರಿಗೆ ಮಾಹಿತಿ ನೀಡಿದರು. ವಿಮೆಗೆ ಸಂಬಂಧಿಸಿದಂತೆ ತಮ್ಮ ಬೆಳೆವಾರು ಸಮಸ್ಯೆಗಳನ್ನು ರೈತರು ಬ್ಯಾಂಕ್ ಅಧಿಕಾರಿಗಳು ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ. ಎಸ್. ಎಮ್. ಮಂಟೂರ ರವರು ವಹಿಸಿ ರೈತರು ತಮ್ಮ ಬೆಳೆಗಳಿಗೆ ಸಿಗಬಹುದಾದ ಸಾಲ ಸೌಲಭ್ಯಗಳನ್ನು ಪಡೆಯಬೇಕಲ್ಲದೇ, ಪ್ರಧಾನ ಮಂತ್ರಿ ಬೆಳೆ ವಿಮಾ ಯೋಜನೆಯ ಲಾಭವನ್ನು ಪಡೆಯಬೇಕೆಂದು ತಿಳಿಸಿದರು. ಜಿಲ್ಲೆಯ 90 ಕ್ಕೂ ಹೆಚ್ಚು ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.






## "ಶ್ರೀಗಂಧದ ಬೇಸಾಯ ಮತ್ತು ಅರಣ್ಯ ಕೃಷಿ ಸಂಬಂಧಿತ ವಿಷಯಗಳ ಕುರಿತು ತರಬೇತಿ"

ಧಾರವಾಡ ಕೃಷಿ ವಿಜ್ಞಾನ ಕೇಂದ್ರದಲ್ಲಿ "ಲಾಭದಾಯಕ ಶ್ರೀಗಂಧದ ಬೇಸಾಯ ಮತ್ತು ಅರಣ್ಯ ಕೃಷಿ ಸಂಬಂಧಿತ ವಿಷಯಗಳ ಕುರಿತು" ಒಂದು ದಿನದ ತರಬೇತಿಯನ್ನು ದಿ: 08 ಡಿಸೆಂಬರ್ 2017 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಯಿತು. ಮುಖ್ಯಸ್ಥರಾದ ಡಾ. ಶುಭಾ ಎಸ್. ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀಗಂಧದ ಪ್ರಾಮುಖ್ಯವನ್ನು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ವಿಜ್ಞಾನಿಗಳಾದ ಡಾ. ಪಿ. ವಿ. ಸೋಮಶೇಖರ ಹಾಗೂ ಡಾ. ಕೆ.ಟಿ. ಚಂದ್ರಶೇಖರ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಡಾ. ಪಿ. ವಿ. ಸೋಮಶೇಖರ, ವಿಜ್ಞಾನಿಗಳು (ಜೈವಿಕ ತಂತ್ರಜ್ಞಾನ) ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಇವರು ಶ್ರೀಗಂಧ ಬೆಳೆಯ ಸಂಪೂರ್ಣ ನರ್ಸರಿ ಮಾಹಿತಿ, ಶ್ರೀಗಂಧದ ಅವಲಂಬಿತ ಬೆಳೆಗಳ ಮಾಹಿತಿ ಹಾಗೂ ಇತರೆ ಅರಣ್ಯ ಕೃಷಿಯ ಬಗ್ಗೆ ಮಾಹಿತಿ ನೀಡಿದರು. ಡಾ. ಕೆ.ಟಿ. ಚಂದ್ರಶೇಖರ ವಿಜ್ಞಾನಿಗಳು, (ಅರಣ್ಯ ಸಸ್ಯಶಾಸ್ತ್ರ) ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಇವರು ಶ್ರೀಗಂಧದಲ್ಲಿ ಬರುವಂತಹ ಅಡೆತಡೆಗಳು, ಕಾನೂನುಗಳ ಸಡಲೀಕರಣ, ಶ್ರೀಗಂಧದ ಮರಗಳನ್ನು ಕಳ್ಳಕಾಕರಿಂದ ಕಾಪಾಡುವ ವಿಧಾನಗಳು ಹಾಗೂ ಪೀಡೆಗಳ ನಿರ್ವಹಣೆ ಕುರಿತು ಸಮಗ್ರ ಮಾಹಿತಿಯ ಉಪನ್ಯಾಸ ನೀಡಿದರು. ತರಬೇತಿಯ ನಿಯುಕ್ತ ಶ್ರೀಗಂಧದ ಹಸ್ತ ಪ್ರತಿಗಳನ್ನು ಶಿಬಿರಾರ್ಥಿಗಳಿಗೆ ವಿತರಿಸಲಾಯಿತು ಮತ್ತು ವಸ್ತು ಪ್ರದರ್ಶನವನ್ನು ಸಹ ಏರ್ಪಡಿಸಲಾಗಿತ್ತು. ಕೇಂದ್ರದ ತೋಟಗಾರಿಕೆ ವಿಜ್ಞಾನಿಗಳಾದ ಡಾ. ಅಕ್ಕಮಹಾದೇವಿ ಅಗಸಿಮನಿ ಸದರಿ ಕಾರ್ಯಕ್ರಮವನ್ನು ಆಯೋಜಿಸಿ, ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರನ್ನು, ಸಂಪನ್ಮೂಲ ವ್ಯಕ್ತಿಗಳನ್ನು ಹಾಗೂ ಭಾಗವಹಿಸಿದ ರೈತರು, ರೈತ ಮಹಿಳೆಯರನ್ನು ಸ್ವಾಗತಿಸಿದರು. ಸುಮಾರು 60 ಜನ ಈ ಕಾರ್ಯಕ್ರಮದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ರೈತರು, ಉದ್ಯಮಿಗಳು, ಯುವಕರು ಮತ್ತು ಯುವತಿಯರು ಭಾಗವಹಿಸಿದ್ದರು.





## ಕೃಷಿ ವಿಜ್ಞಾನ ಕೇಂದ್ರದ ವಿವಿಧ ಘಟಕಗಳಿಗೆ ಗಣ್ಯರ ಭೇಟಿ



ದಿನಾಂಕ: 13.10.2017 ರಂದು ಡಾ. ಹೆಚ್. ಬಸಪ್ಪ , ವಿಸ್ತರಣಾ, ನಿರ್ದೇಶಕರು, ಕೃವಿವಿ, ಧಾರವಾಡ ಇವರು ವಿಸ್ತರಣಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ನಂತರ ಕೃಷಿ ವಿಜ್ಞಾನ ಕೇಂದ್ರ, ಧಾರವಾಡಕ್ಕೆ ಭೇಟಿ ನೀಡಿ ಕೇಂದ್ರದ ಪ್ರಾತ್ಯಕ್ಷಿಕೆ ಘಟಕಗಳನ್ನು ವೀಕ್ಷಿಸಿ ವಿಜ್ಞಾನಿಗಳ ಕಾರ್ಯಚಟುವಟಿಕೆಗಳ ಪ್ರಗತಿ ಪರಿಶೀಲಿಸಿದರು.


ಸಂಪಾದಕರು ಹಾಗೂ ಪ್ರಕಾಶಕರು : ಡಾ. ಶುಭಾ ಎಸ್.
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

ಅಕ್ಷರ ಜೋಡಣೆ ಮತ್ತು ವಿನ್ಯಾಸ : ಡಿಟಿಪಿ, ಘಟಕ
ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ

ಸಹ ಸಂಪಾದಕರು

ಕು. ಕಲಾವತಿ ಕೆ. ಕಂಬಳಿ
ಡಾ. ಪ್ರಸನ್ನ ಕುಮಾರ ಬಿ.ಎಚ್.
ಡಾ. ವಿಜಯಕುಮಾರ ಪಿ.
ಡಾ. ಅಕ್ಕಮಹಾದೇವಿ ಡಿ. ಅಗಸಿಮನಿ
ಡಾ. ವಿನುತಾ ಯು.ಮುಕ್ತಾಮಠ
ಶ್ರೀಮತಿ ಶೈಲಜಾ ಎನ್. ಗಲಗಲಿ
ಡಾ. ಜಯಶ್ರೀ ಪತ್ತಾರ
ಡಾ. ಪ್ರವೀಣ ಗೊರೋಜಿ



ಇಂದ,
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಭಾ.ಕೃ.ಸಂ.ಮಂ.-ಕೃಷಿ ವಿಜ್ಞಾನ ಕೇಂದ್ರ
ಸೈದಾಪುರ ಫಾರ್ಮ್, ಧಾರವಾಡ 580 005
ಕರ್ನಾಟಕ, ದೂರವಾಣಿ : 0836-2444272
ಮಿಂಚಂಚೆ : kvkdwd@uasd.in
ವೆಬ್‌ಸೈಟ್ : www.kvkdharwad.org
ಫೇಸ್‌ಬುಕ್ : Krishi Vigyan Kendra Dharwad


ಗೆ,

ತೆರೆದ ಅಂಚೆ

For free Kisan mobile advisory services, please call 0836-2444272 / visit www.kvkdharwad.org for registration